ಮಿಸ್.ನಂ. 03-2022
ಪಿ.ಡಬ್ಲ್ಯೂ-01

<u>ಸಾಕ್ಷಿಯನ್ನು ದಿಃ **17.02.2024** ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>

<u>ಪಾಟೀ ಸವಾಲುಃ ಎದುರುದಾರರ ಪರ ಶ್ರೀ.**B.T.R.**ವಕೀಲರಿಂದ.</u>

ನಾನು ಮೇಲ್ಮನವಿ ಸಲ್ಲಿಸಿದ್ದು ಅದು ವಜಾ ಆಗಿರುತ್ತದೆ. ಆದ ಕಾರಣ ಈ ಪ್ರಕರಣವನ್ನು ದಾಖಲು ಮಾಡಿರುತ್ತೇನೆ. ಮೇಲ್ಮನವಿ ಯಾವಾಗ ವಜಾ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಮೇಲ್ಮನವಿ ವಜಾ ಆದ 2 ತಿಂಗಳಿಗೆ ಈ ಪ್ರಕರಣವನ್ನು ದಾಖಲು ಮಾಡಿದ್ದು ನನಗೆ ದಿನಾಂಕ ಗೊತ್ತಿಲ್ಲ. ಮೇಲ್ಮನವಿ ವಜಾ ಆದ ದಿನವೇ ನಿಮಗೆ ವಜಾ ಆಗಿರುವ ವಿಷಯ ಗೊತ್ತಿದ್ದು ಯಾವ ಕಾರಣಕ್ಕೆ ವಿಳಂಬ ಮಾಡಿ ಈ ಪ್ರಕರಣದ ದಾಖಲು ಮಾಡಿದ್ದೀರಿ ಎಂದರೆ ಸಾಕ್ಷಿ 2 ತಿಂಗಳೊಳಗೆ ದಾಖಲು ಮಾಡಿದ್ದೇನೆ ಎಂದು ಹೇಳುತ್ತಾರೆ.

ದಿನಾಂಕ 04.12.2021 ಮೇಲ್ಮನವಿ ವಜಾ ಆಗಿರುತ್ತದೆ ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ. ದಿನಾಂಕ 07.02.2022 ರಂದು ನಾನು ಈ ಪ್ರಕರಣ ದಾಖಲು ಮಾಡಿರುತ್ತೇನೆ. ನನಗೆ ದಿನಾಂಕ ನೆನಪಿಲ್ಲವೆಂದು ಹೇಳುತ್ತಾರೆ. ಮಧ್ಯಂತರ ಅರ್ಜಿಯಲ್ಲಿ ಸರಿಯಾದ ಕಾರಣ ಹೇಳಿಲ್ಲವೆಂದರೆ ಸರಿಯಲ್ಲ. ದಿನಾಂಕ 04.12.2021 ರಂದು ಬೆಳಿಗ್ಗೆ ಕೇಸನ್ನು ಕರೆದಾಗ ನಾನು ಹಾಜರಾಗಿದ್ದು ನಂತರ 3.10 ಗಂಟೆಗೆ ಮತ್ತು 4.49 ಕ್ಕೆ ಕರೆದಾಗ ನಾನು ಬಂದಿರುವುದಿಲ್ಲವೆಂದರೆ ಸರಿಯಲ್ಲ. ನಾನು ನ್ಯಾಯಾಲಯದ ಮುಂದೆ ಹಾಜರಿದ್ದರು ಸಹ ನ್ಯಾಯಾಲಯದ ಒಳಗೆ ಉದ್ದೇಶ ಪೂರ್ವಕವಾಗಿ ಬಂದಿರುವುದಿಲ್ಲವೆಂದರೆ ಸರಿಯಲ್ಲ.

ಸಾಕ್ಷಿ ಪ್ರಮಾಣ ಪತ್ರದ ಪ್ಯಾರಾ 12 ರಲ್ಲಿ ನ್ಯಾಯಾಲಯ ನಮಗೆ ಸಾಕಷ್ಟು ಕಾಲಾವಕಾಶ ನೀಡದೇ ಪ್ರಕರಣವನ್ನು ವಜಾ ಮಾಡಿರುತ್ತದೆಂದು ಬರೆಯಲಾಗಿದ್ದು ನಮಗೆ ಸಾಕಷ್ಟು ಕಾಲವಕಾಶ ನೀಡಿ ವಜಾ ಮಾಡಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ. ಸಾಕ್ಷಿ ಪ್ರಮಾಣ ಪತ್ರದ ಪ್ಯಾರಾ 13 ರಲ್ಲಿ ನಮ್ಮ ವಕೀಲರು ಮಾನ್ಯ ಉಚ್ಚ ನ್ಯಾಯಾಲಯದ ಪ್ರಕರಣ ಬೋರ್ಡ್ ಗೆ ಬಂದಿದ್ದರಿಂದ ಮತ್ತು 1.30 ಗಂಟೆಗೆ ಅವರಿಗೆ ಈ ಕುರಿತಾಗಿ ಕರೆ ಬಂದಿದ್ದರಿಂದ ಹೋಗಿರುವುದಾಗಿ ಬರೆದಿರುವುದು ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ದಿನಾಂಕ 06.12.2021 ರಂದು ಮೇಲ್ಮನವಿ ವಜಾ ಆದ ಬಗ್ಗೆ ಗೊತ್ತಾಗಿದ್ದು ಪ್ರಕರಣ ಅದೇ ದಿನವೇ ದಾಖಲು ಮಾಡಿಲ್ಲವಾ ಎಂದರೆ ಸಾಕ್ಷಿ 2 ತಿಂಗಳೊಳಗಾಗಿ ದಾಖಲು ಮಾಡಿದ್ದೇನೆಂದು ಹೇಳುತ್ತಾರೆ.

ನಾನು ಎದುರುದಾರರ ವಿರುದ್ಧ ಓ ಎಸ್. 101/2015 ದಾವೆಯನ್ನು ದಾಖಲು ಮಾಡಿದ್ದು ಅದು ಸಹ ವಜಾ ಆಗಿರುತ್ತದೆ ಎಂದರೆ ಸಾಕ್ಷಿ ನನಗೆ ಆರೋಗ್ಯ ಸರಿ ಇರಲಿಲ್ಲವೆಂದು ಹೇಳುತ್ತಾರೆ. ಸಾಕ್ಷಿ ಪ್ರಮಾಣ ಪತ್ರದ ಪ್ಯಾರಾ 12 ಮತ್ತು 13 ರಲ್ಲಿ ಹೇಳಿರುವ ವಿಷಯ ಸುಳ್ಳು ಇದ್ದು ನಮಗೆ ಸಾಕಷ್ಟು ಕಾಲಾವಕಾಶ ನೀಡಿದ್ದರು ಸಹ ನಾವು ನ್ಯಾಯಾಲಯಕ್ಕೆ ಹಾಜರಾಗದೇ ಇರುವ ಕಾರಣ ಮೇಲ್ಮನವಿ ವಜಾ ಆಗಿರುತ್ತದೆ ಆದ್ದರಿಂದ ಈ ಅರ್ಜಿ ಉರ್ಜಿತವಾಗಿರುವುದಿಲ್ಲವೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)
ಓ.ಹೇ.ಕೇ. ಸರಿ ಇದೆ

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಧಂ
ಕುಣಿಗಲ್.